


ಕೇಶವ ಮಳಗಿ

ಈ ಸಂಬಂಧವಿನ್ನು ಉಳಿಯಲಾರದು ಎಂಬ ಜೀವ ಹಿಂಡುವ ಹೆದರಿಕೆ ಹುದುಲಿನಲ್ಲಿ ಸಿಕ್ಕ ಒಣಗಿದೆಲೆಯಂತೆ ತಳ ಸೇರಿ ಕರಗಿಹೋಗಿತ್ತು. ಕಾಲದ ನಿರ್ದಯತೆಯ ಎದುರು ಸಂಬಂಧವನ್ನು ಉಳಿಸಿಕೊಳ್ಳುವುದಾಗಲಿಲ್ಲ. ಆದರೆ, 'ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು,' ಎನ್ನುವಂತೆ ಯಾವುದೂ ಮರೆಯುವುದಾಗಿರಲಿಲ್ಲ. ಬದುಕಿನಲ್ಲಿ ಬಿಕ್ಕಟ್ಟು ಎದುಗಾದಾರಲೆಲ್ಲ ಉಸಿರುಗಟ್ಟಿಸುವ ರಣ ಬೇಸಿಗೆಯಲ್ಲಿ ಸುಳಿವ ದೈವಿಕ ಗಾಳಿ ಒಡಲು ಸೇರಿ ಬದುಕುವಂತೆ ಎಳೆಯ ಮುಖ ಮೈಮನಸ್ಸುಗಳನ್ನು ತುಂಬುತ್ತಿತ್ತು. ಸಂಕಟದ ಗಳಿಗೆಯನ್ನು ಮೀರಿ ಮತ್ತೆ ಜೀವನದ ಗಂಟನ್ನು ಹೆಗಲಿಗೇರಿಸಿ ಮುನ್ನಡೆವ ಕಸುವು ತುಂಬುತ್ತಿತ್ತು.

ಹಳೆಯ ನೆನಪಿನ ಸಿಬುರುಗಳನ್ನು ಎಳೆಎಳೆ ಬಿಡಿಸಿ, ಗೂಡು ಕಟ್ಟಿ, ಬಿಚ್ಚಿ, ಮತ್ತೆ ಹೆಣೆದು... ವಾಸ್ತವದ ಬದುಕಿನ ಪರಿವೆಯೇ ಇಲ್ಲದೆ ಒಳಗೆ ಕಟ್ಟಿಕೊಂಡ ಬೇರೊಂದು ಜಗತ್ತು. ಹೊರಗಿನ ನಿಜದ ಲೋಕದಲ್ಲಿನ ಅವಮಾನ, ಕತ್ತು ಸೀಳುವ ಸ್ಪರ್ಧೆ, ಉಳಿದವರನ್ನು ಕೊಂದು ತಿಂದೇ ಬದುಕುವ ಹುಚ್ಚು ಉನ್ಮಾದ, ಕೊನೆಗೆ ನಿರರ್ಥಕತೆ. ಆದರೆ ಎಲ್ಲವೂ ವಾಸ್ತವ. ಒಳಗೆ ಕಟ್ಟಿಕೊಂಡ ಲೋಕದಲ್ಲಿ ಯಾವುದೂ ನಿಜವಲ್ಲ, ಕನಸೋ–ಭ್ರಮೆಯೋ ಎಂದು ಅರಿವಾಗುವ ಮೊದಲೇ ಕರಗಿಹೋದ ಕ್ಷಣದ ಸುಖ. ಆದರೂ ನೆಮ್ಮದಿ, ಹಿತ, ಸಾರ್ಥಕಭಾವ.



★★★

ಕಳೆದುಕೊಳ್ಳುವ ಭಯ ಶುರುವಾದದ್ದು ಮ್ಯಾಟ್ರಿಕ್ ಪರೀಕ್ಷೆ ಇನ್ನೇನು ಹತ್ತಿರ ಎನ್ನುವಾಗ. ಎರಡೂವರೆ ವರ್ಷಗಳು ಆಕಾಶದ ಚಂಚಲ ಮೋಡಗಳಂತೆ ಸರಿದುಹೋಗಿದ್ದವು. ಊರಿಗೆ ಬಂದೊಡನೆ ಶಾಲೆಗೆ ಹೆಸರು ಹಚ್ಚುವುದು, ಪರಿಚಯ ಮಾಡಿಕೊಳ್ಳುವುದು, ಕರೆದವರ ಮನೆಗೆ ಅತಿಥಿಗಳಾಗಿ ಚಹಾಫರಾಳಕ್ಕೆ ಹೋಗುವುದು ಎಲ್ಲ ವಾರದಲ್ಲೇ ಮುಗಿದುಹೋಗಿ ಊರವರೇ ಆದಂತಾಗಿತ್ತು. ಊರ ಹುಡುಗ–ಹುಡುಗಿಯರ ಚಿಕ್ಕ ಗುಂಪು ಬೆಳಗ್ಗೆಯೇ ನಗರೇಶ್ವರ ದೇವಳಕ್ಕೆ ಹೋಗುವುದು ರೂಢಿ. ನಸುಕಲ್ಲೇ ಸ್ನಾನ ಮಾಡಿ ದೇವಸ್ಥಾನದ ತೀರ್ಥಹೂವು ಪಡೆದು ಶಾಲೆಗೆ ಹೋಗುವುದು, ಓದಿನಲ್ಲಿ ಬೆರಕಿಯಿದ್ದವರು ಗಣಿತ–ವಿಜ್ಞಾನದ ಶಿಕೋಣಿಗೆ ಹೋಗುವುದು ಕೂಡ ಪದ್ಧತಿಯೇ. ಈ ಸಣ್ಣ ಗುಂಪಿಗೆ ತಾನೂ ಸೇರಿಕೊಂಡಾಗ ಆಕೆಯ ಗೆಳೆತನ ಇನ್ನಷ್ಟು ನಿಕ್ಕಿಯಾಗಿತ್ತು. ತನ್ನವು ನಗರದ ಛಾಪಿರುವ ಟೆರಿಕಾಟ್ ಚಡ್ಡಿಬುಶರ್ಟ್‌ಗಳಾದರೆ ಆಕೆಯದು ಅಗಲ ಹೂಗಳಿರುತ್ತಿದ್ದ